

# ಕರಿಯನ ಕಲಾ ನೌಕೆ



ಯಿಂಕಾ ಶೋನಿಬೇರ್



ಲಂಡನ್ನಿನ ಟ್ರಫಲ್ಗಾರ್‌ಸ್ಕ್ವೇರ್ ಕಾಳಗದ ಗತ ಕಾಲ ನೆನಪಿಸುವ ಯತ್ನವಿದು. ಅಡ್ಮಿರಲ್ ಹೊರಾಷಿಯೊ ನೆಲ್ಸನ್ ನೌಕೆಯ ಪ್ರತಿರೂಪ. ಫೋರ್ತ್ ಪ್ಲಿಂತ್ ಮೇಲೆ ಪ್ರತಿಷ್ಠಾಪಿತಗೊಂಡ ಅಪರೂಪದ ಕಲಾಕೃತಿ. ನೈಜೀರಿಯ ಮೂಲದ ಹೆಸರಾಂತ ಕಲಾವಿದ ಯಿಂಕಾ ಶೋನಿಬೇರ್ 4.7 ಮೀಟರ್ ಗಾಜಿನ ನಳಿಕೆಯಲ್ಲಿ ನೆಲ್ಸನ್ ನೌಕೆಯನ್ನು ಹೀಗೆ ಬಾಟಲಿಗಿಳಿಸಿ ಬಿರಡೆ ಹಾಕಿಟ್ಟಿದ್ದಾನೆ.

ಸರ್ ಚಾರ್ಲ್ಸ್ ಬ್ಯಾರಿ 1841ರಲ್ಲಿ ಫೋರ್ತ್ ಪ್ಲಿಂತ್ ವಿನ್ಯಾಸಗೊಳಿಸಿದ್ದು. ಇಲ್ಲಿ ನಾಲ್ಕನೇ ವಿಲಿಯಂ ಪ್ರತಿಮೆ ಅನಾವರಣಗೊಳ್ಳಬೇಕಿತ್ತು. ನಿಧಿ ಸಂಗ್ರಹವಾಗದೇ ಪ್ರತಿಮೆ ನಿಲ್ಲಲಿಲ್ಲ. ಸಾರ್ವಜನಿಕರ ಹಣದಿಂದ ಎಡ್ವರ್ಡ್ ಜೆನರ್ ಪ್ರತಿಮೆ 1858ರಲ್ಲಿ ಅನಾವರಣಗೊಂಡಿತು. ಲಸಿಕೆ ತಜ್ಞನ ವಿರೋಧಿ ಆಂದೋಲನ ಚುರುಕುಗೊಂಡ ಪರಿಣಾಮ ಎಡ್ವರ್ಡ್ ಕೆಳಕ್ಕಿಳಿದು, ಕೆನ್ಸಿಂಗ್ಟನ್ ಗಾರ್ಡನ್ಸ್ ಮೇಲೇರಿ ಕುಳಿತ. ಯುದ್ಧವಿರೋಧಿ ಹೋರಾಟದ ಪರಿಣಾಮ ಈ ಮಿಲಿಟರಿ ಹೀರೋ ಕೂಡ ನೆಲಕ್ಕಿಳಿಯಲೇಬೇಕಾಯಿತು. ಅಂದಿನಿಂದ ಫೋರ್ತ್ ಪ್ಲಿಂತ್ ತೆರವಾಗೇ ಉಳಿದಿದೆ.

ಇತ್ತೀಚೆಗೆ ಸಮಕಾಲೀನ ಕಲಾವಿದರಿಗೆ ತಮ್ಮ ಕಲಾಕೃತಿಗಳನ್ನು ಪ್ರತಿಷ್ಠಾಪಿಸಲು ಇಲ್ಲಿ ಅವಕಾಶ ಮಾಡಿಕೊಡಲಾಗುತ್ತಿದೆ. ಹೀಗಾಗಿ ಅದ್ಭುತ ಕಲಾಕೃತಿಗಳು ಇಲ್ಲಿ ಒಂದಷ್ಟು ಕಾಲ ವಿರಾಜಮಾನವಾಗುತ್ತಿವೆ. ನೆಲ್ಸನ್ ಶಿಪ್ ಈ ದಶಮಾನದ ಅಂದರೆ 2010ರ ಅದ್ಭುತ ಮತ್ತು ವಿನೂತನ ಕಲಾಕೃತಿಯ ಇನ್‌ಸ್ಟಾಲೇಷನ್. ಇದಿಲ್ಲಿ 18 ತಿಂಗಳ ಕಾಲ ವಿರಾಜಮಾನವಾಗಿರಲಿದೆ.

ಯಿಂಕಾ ಶೋನಿಬೇರ್ ಹುಟ್ಟಿದ್ದು (1962) ಲಂಡನ್‌ನಲ್ಲಿ. ಹುಟ್ಟಿನಿಂದ ಪೊಲಿಯೊ ಪೀಡಿತ. ಲಂಡನ್‌ನ ಬ್ಯಾಮ್ ಶಾ ಕಾಲೇಜ್ ಆಫ್ ಆರ್ಟ್ (ಈಗಿದು ಸೆಂಟ್ರಲ್ ಮಾರ್ಟಿನ್ಸ್ ಕಾಲೇಜ್ ಆಫ್ ಆರ್ಟ್ ಅಂಡ್ ಡಿಸೈನ್) ನಲ್ಲಿ ಫೈನ್ ಆರ್ಟ್ ಕಲಿತು, ಗೋಲ್ಡ್‌ಸ್ಮಿತ್ಸ್ ಕಾಲೇಜ್‌ನಲ್ಲಿ ಎಂಎಫ್‌ಎ ಪದವಿ ಗಳಿಸಿಕೊಂಡವ. ವಸಾಹತು ಮತ್ತು ವಸಾಹತೋತ್ತರ ವಿಷಯಗಳಲ್ಲಿ ಏನನ್ನೋ ಅರಸುತ್ತಾ ಸಾಗುತ್ತಾನೆ. ಅದನ್ನು ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸುತ್ತಾನೆ. ಆ ಮೂಸೆಯಿಂದ ಹಲವಾರು ಇನ್‌ಸ್ಟಾಲೇಷನ್‌ಗಳನ್ನು ಈತ ಮಾಡಿದ್ದಾನೆ. ಇಂಥ ಹಲವಾರು ಸಾಹಸಗಳಿಂದ ಗಮನ ಸೆಳೆದ ಯಿಂಕೊ ರೊಟರ್‌ಡ್ಯಾಂನಲ್ಲಿ ಮಾಡಿದ ಡಬಲ್ ಡಚ್ ಪ್ರದರ್ಶನದಿಂದ 2004ರ 'ಟರ್ನರ್ ಪ್ರಶಸ್ತಿ'ಗೆ ನಾಮಾಂಕಿತಗೊಂಡಿದ್ದ. ಬಿಬಿಸಿ ವೆಬ್‌ಸೈಟ್ ಪೋಲ್‌ನಲ್ಲಿ ಅತ್ಯಂತ ಜನಪ್ರಿಯ ಕಲಾವಿದನಾಗಿ ಹೊರಹೊಮ್ಮಿದ್ದ. ಶೇ 64 ಮಂದಿ ಈತನ ಪರ ಮತ ಹಾಕಿದ್ದರು. ರಾಯಲ್ ಕಾಲೇಜ್ ಆಫ್ ಆರ್ಟ್‌ನಿಂದ ಫೈನ್ ಆರ್ಟ್ಸ್‌ನಲ್ಲಿ ಗೌರವ ಡಾಕ್ಟರೇಟ್ ಪದವಿ ಗಳಿಸಿದ್ದಾನೆ.

■ ದಿಲೀಪ್